# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. : 22 ಪ್ರಾ.ಸಾ. : 06**

| | | |
|---|---|---|
| ಸಾಕ್ಷಿಯ ಹೆಸರು | : | ಗುರುಶಾಂತ ಕಲ್ಲಪ್ಪ ಗಾಣಗಿ |
| ತಂದೆಯ ಹೆಸರು | : | ಕಲ್ಲಪ್ಪ ಗಾಣಗಿ |
| ವಯಸ್ಸು | : | 27 ವರ್ಷ |
| ಕೆಲಸ | : | ಬೀಟ್ ಫಾರೆಸ್ಟ್ ಗಾರ್ಡ್, ಕದ್ರಾ |
| ವಾಸ | : | ಉಳವಿ |

**ದಿನಾಂಕಃ 07-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಜುಲೈ 2018 ರಿಂದ ಅಕ್ಟೋಬರ್ 2024ರ ವರೆಗೆ ನಾನು ಅಣಶಿ ವಲಯ ಅರಣ್ಯಾಧಿಕಾರಿಯ ವ್ಯಾಪ್ತಿಯಲ್ಲಿ ಬರುವ ಉಳವಿ ಶಾಖೆ, ಉಳವಿ ಗಸ್ತಿನಲ್ಲಿ ಅರಣ್ಯ ರಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಆ ಸಮಯದಲ್ಲಿ ಚಾಸಾ-23 ಅಖೀಲ್ ದೇಸಾಯಿ ಹಾಗೂ ಇನ್ನಿಬ್ಬರು ಸಹ ಉಳವಿ ಶಾಖೆ, ಉಳವಿ ಗಸ್ತಿನಲ್ಲಿ ಅರಣ್ಯ ವೀಕ್ಷಕರಾಗಿ ಕೆಲಸ ಮಾಡುತ್ತಿದ್ದರು. ನಮ್ಮ ಬೀಟ್ ವ್ಯಾಪ್ತಿಯಲ್ಲಿ ಶಿವಪುರ, ಹೆಬ್ಬಾಳ, ಗದ್ದೆಮನೆ, ನೆತುರ್ಗ, ಶಿವಪುರ, ಹರಳಯ್ಯನ ಚಿಲುಮೆ, ಆಕಳಗವಿ ಅರಣ್ಯ ಪ್ರದೇಶಗಳ ಬರುತ್ತಿದ್ದವು. ಈ ಪ್ರದೇಶಗಳ ಪೈಕಿ ಹರಳಯ್ಯನ ಚಿಲುಮೆ ಮತ್ತು ಆಕಳಗವಿ ಅರಣ್ಯ ಪ್ರದೇಶಗಳು ಪ್ರೇಕ್ಷಣೀಯ ಸ್ಥಳಗಳಾಗಿದ್ದವು. ಆ ಸಮಯದಲ್ಲಿ ಚಾಸಾ-52 ಈರೇಶ ಕಬ್ಬಿನ ರವರು ನಮ್ಮ ಮೇಲಾಧಿಕಾರಿಗಳಾಗಿದ್ದರು. ನಮ್ಮ ಮೇಲಾಧಿಕಾರಿಗಳ ಆದೇಶದಂತೆ ನಾವು ಕರ್ತವ್ಯ ನಿರ್ವಹಿಸುತ್ತಿರುತ್ತೇವೆ.

2. ಈಗ ಧಾರವಾಡ ಜೈಲಿನ ವಿಸಿ ಮೂಲಕ ಹಾಜರುಪಡಿಸಿರುವ 3 ನೇ ಆರೋಪಿ ಶಫಿ ನನಗೆ ಗೊತ್ತು, ಆತ ಉಳವಿಯ ವಾಸಿಯಾಗಿರುತ್ತಾನೆ ಹಾಗೂ ಅಲ್ಲಿ ಆತನ ಮನೆ ಇರುತ್ತದೆ. ನಾವು ನಮ್ಮ ಮೇಲಾಧಿಕಾರಿಗಳು ಸೂಚಿಸಿದಂತೆ ಪ್ರತಿದಿನ ಗಸ್ತು ಕರ್ತವ್ಯಕ್ಕೆ ಹೋಗುತ್ತೇವೆ. ಅದೇ ರೀತಿ ನಿರ್ವಹಿಸಿ, ದಿಃ 15-10-2018 ರಂದು ಸಂಜೆ 04-30 ರಿಂದ 05-00 ಗಂಟೆ ಸಮಯದಲ್ಲಿ ನಾವು ಉಳವಿಯ ಚೆಕ್ ಪೋಸ್ಟ್ ನಲ್ಲಿದ್ದಾಗ ಗಸ್ತು ಕರ್ತವ್ಯದಲ್ಲಿದ್ದಾಗ, 3 ನೇ

ಆರೋಪಿಯು ತನ್ನ ಬೈಕ್ ಮೇಲೆ ಉಳವಿ ಕಡೆಯಿಂದ ಆಕಳಗವಿ ಅರಣ್ಯ ಪ್ರದೇಶದ ಕಡೆಗೆ ಓಡಾಡುತ್ತಿದ್ದು, ಆ ಸಮಯದಲ್ಲಿ ಉಳವಿ ಕಡೆಯಿಂದ ಒಂದು ಬೂದು ಬಣ್ಣದ ಕಾರ್ ಸಹ ಬಂದಿದ್ದು, ಸದರಿ ಕಾರ್ ಹಳೆ ಚೆಕ್ ಪೊಸ್ಟ್ ಹತ್ತಿರ ಹೋಗಿ ನಿಂತಿರುತ್ತದೆ. ಸದರಿ ಕಾರಿನಿಂದ ಒಬ್ಬ ವ್ಯಕ್ತಿ ಕೆಳಗ ಇಳಿದು ನಂತರ 3 ನೇ ಆರೋಪಿಯೊಂದಿಗೆ ಆಕಳಗವಿ ಅರಣ್ಯ ಪ್ರದೇಶದ ಕಡೆಗೆ ಹೋಗಿರುತ್ತಾನೆ. ಆ ನಂತರ ಸಂಜೆ 07−00 ಗಂಟೆ ಸುಮಾರಿಗೆ ಆ ಇಬ್ಬರೂ ಆಕಳಗವಿ ಅರಣ್ಯ ಪ್ರದೇಶದಿಂದ ವಾಪಸ್ ಬಂದು, ಉಳವಿ ಕಡೆಗೆ ಹೋಗಿರುತ್ತಾರೆ.

3. ಆ ನಂತರ ದಿಃ 16−10−2018 ರಂದು ನಾನು, ಚಾಸಾ−23 ಅಖೀಲ್ ದೇಸಾಯಿ ಹಾಗೂ ಇನ್ನಿಬ್ಬರು ಅರಣ್ಯ ವೀಕ್ಷಕರು ಶಿವಪುರ, ಹೆಬ್ಬಾಳ, ಗದ್ದೆ ಮನೆ ಅರಣ್ಯ ಪ್ರದೇಶದಲ್ಲಿ ಗಸ್ತು ಮಾಡಿ, ಸಂಜೆ 04−00 ರಿಂದ 04−30 ಗಂಟೆ ಸುಮಾರಿಗೆ ಉಳವಿಯ ಚೆಕ್ ಪೊಸ್ಟ್ ಗೆ ಬಂದಿರುತ್ತೇವೆ. ಆ ಸಮಯದಲ್ಲಿ 3 ನೇ ಆರೋಪಿಯು ಉಳವಿ ಕಡೆಯಿಂದ ಬೈಕ್ ಮೇಲೆ ಬಂದು, ಉಳವಿ ಚೆಕ್ ಪೊಸ್ಟ್ ಹತ್ತಿರ ಓಡಾಡುತ್ತಿದ್ದ, ಆ ಸಮಯದಲ್ಲಿ ಹಿಂದಿನ ದಿನ ನೋಡಿದ್ದ ಬೂದು ಬಣ್ಣದ ಕಾರ್ ಅಲ್ಲಿಗೆ ಬಂದಿದ್ದು, ಸದರಿ ಕಾರಿನಲ್ಲಿ ಎರಡು ಜನ ವ್ಯಕ್ತಿಗಳು ಬಂದು ಕಾರಿನಿಂದ ಕೆಳಗೆ ಇಳಿದಿರುತ್ತಾರೆ. ಕಾರ್ ನಿಂದ ಇಳಿದ ವ್ಯಕ್ತಿಗಳ ಪೈಕಿ ಒಬ್ಬನ ಬಳಿ ಒಂದು ಬ್ಯಾಗ್ ಇತ್ತು, ಕಾರಿನಿಂದ ಬಂದ ಎರಡು ಜನರು ಹಳೆ ಚೆಕ್ ಪೊಸ್ಟ್ ನಿಂದ ಹೊಸ ಚೆಕ್ ಪೊಸ್ಟ್ ವರೆಗೆ ನಡೆದುಕೊಂಡು ಬಂದು, ಆ ನಂತರ 3 ನೇ ಆರೋಪಿ ಹಾಗೂ ಕಾರಿನಲ್ಲಿ ಬಂದ ಎರಡು ಜನ, ಹೀಗೆ ಮೂರೂ ಜನರು ಸೇರಿ ಆಕಳಗವಿ ಅರಣ್ಯ ಪ್ರದೇಶದ ಕಡೆಗೆ ಬೈಕ್ ನಲ್ಲಿ ಹೋಗಿರುತ್ತಾರೆ. ಆ ನಂತರ ಸಂಜೆ 07−30 ಗಂಟೆಗೆ 3 ನೇ ಆರೋಪಿ ಹಾಗೂ ಆತನೊಂದಿಗೆ ಹೋಗಿದ್ದ ಎರಡು ವ್ಯಕ್ತಿಗಳ ಪೈಕಿ ಒಬ್ಬ ವ್ಯಕ್ತಿ ಅಂದರೆ ಒಟ್ಟು ಎರಡು ಜನ ಬೈಕ್ ಮೇಲೆ ಚೆಕ್ ಪೊಸ್ಟ್ ಗೆ ವಾಪಸ್ ಬಂದು, ಅಲ್ಲಿಂದ 3 ನೇ ಆರೋಪಿ ಬೈಕ್ ಮೇಲೆ ಹಾಗೂ ಮತ್ತೊಬ್ಬ ವ್ಯಕ್ತಿ ಕಾರಿನ ಮೂಲಕ ಉಳವಿ ಕಡೆಗೆ ಹೋಗಿರುತ್ತಾರೆ.

4. ದಿಃ 23−10−2018 ರಂದು ನಾನು, ಚಾಸಾ−23 ಹಾಗೂ ನಮ್ಮ ಇತರೇ ಮೂರ ಸಿಬ್ಬಂದಿಗಳು ಉಳವಿ ಹೊಸ ಚೆಕ್ ಪೊಸ್ಟ್ ನಲ್ಲಿ ಇದ್ದೆವು. ಆ ದಿನ ಬೆಳಿಗ್ಗೆ 09−00 ರಿಂದ 09−30 ಗಂಟೆ ಸುಮಾರಿಗೆ ಸುಮಾರು 4−5 ಪೊಲೀಸ್ ವ್ಯಾನ್ ಗಳು ಹಾಗೂ ಅಂಬ್ಯುಲೇನ್ಸ ಬಂದಿದ್ದು, ಅದರಲ್ಲಿ ಪೊಲೀಸರು ಹಾಗೂ ಈಗ ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿ ಹಾಗೂ ವಿಸಿಯಲ್ಲಿರುವ 3 ನೇ ಆರೋಪಿಯನ್ನು ಕರೆದುಕೊಂಡು ಬಂದಿರುತ್ತಾರೆ

ಹಾಗೂ ಇತರೇ ಜನರು ಸಹ ಇದ್ದರು. ನಂತರ ವ್ಯಾನಗಳನ್ನು ಹಾಗೂ ಅಂಬ್ಯುಲೇನ್ಸ ನ್ನು ಚೆಕ್ ಪೊಸ್ಟ್‌ನಲ್ಲಿ ನಿಲ್ಲಿಸಿ, ವ್ಯಾನ್ ನಲ್ಲಿ ಬಂದ ಪೊಲೀಸರು ಚೆಕ್ ಪೊಸ್ಟ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ನಮ್ಮನ್ನು ಕರೆದಿರುತ್ತಾರೆ. ಆ ನಂತರ 2 ಮತ್ತು 3 ನೇ ಆರೋಪಿಗಳು ಪೊಲೀಸರನ್ನು, ನಮ್ಮನ್ನು ಹಾಗೂ ಪೊಲೀಸರ ಜೊತೆ ಬಂದ ಇತರೇ ಜನರನ್ನು ಆಕಳಗವಿ ಅರಣ್ಯ ಪ್ರದೇಶದ ಕಡೆಗೆ ಸುಮಾರು 2 ½ ಕಿ.ಮೀ ಆಕಳಗವಿ ಅರಣ್ಯ ಪ್ರದೇಶದ ಒಳಗಡೆಗೆ ನಡೆದುಕೊಂಡು ಕರೆದುಕೊಂಡು ಹೋಗಿ, ಅಲ್ಲಿ ಗಿಡದ ಪಕ್ಕದಲ್ಲಿ ಬಿದ್ದಿದ್ದ ಶವವನ್ನು 2 ಮತ್ತು 3 ನೇ ಆರೋಪಿತರು ತೋರಿಸಿರುತ್ತಾರೆ. ನಾವು ಶವವನ್ನು ನೋಡಿದಾಗ, ಅದರ ಮೈ ಮೇಲೆ ಒಂದು ನಿಕ್ಕರ್ ಇತ್ತು ಹಾಗೂ ಕತ್ತಿಯಿಂದ ಕಡಿದ ಗಾಯಗಳಿದ್ದವು. ಪೊಲೀಸರ ಜೊತೆ ಬಂದಿದ್ದ ಮೃತನ ಅಣ್ಣನು ಶವವನ್ನು ನೋಡಿ ಗುರುತಿಸಿರುತ್ತಾರೆ ಹಾಗೂ 2 ಮತ್ತು 3 ನೇ ಆರೋಪಿಗಳು ತಾವೇ ಕೊಲೆ ಮಾಡಿ ಶವವನ್ನು ಬಿಸಾಡಿರುತ್ತೇವೆ ಎಂದು ಹೇಳಿರುತ್ತಾರೆ ಹಾಗೂ ಸದರಿ ಶವವು ಪ್ರೇಮಕುಮಾರನ ಶವ ಎಂದು ಹೇಳಿರುತ್ತಾರೆ. ಆ ನಂತರ ಪೊಲೀಸರು ಸ್ಥಳದಲ್ಲಿ ಪಂಚನಾಮೆಗಳನ್ನು ಮಾಡಿರುತ್ತಾರೆ ಹಾಗೂ ಶವವನ್ನು ಅಂಬ್ಯುಲೆನ್ಸ್ ನಲ್ಲಿ ತೆಗೆದುಕೊಂಡು ಹೋಗಿರುತ್ತಾರೆ. 2 ಮತ್ತು 3 ನೇ ಆರೋಪಿತರು ತೋರಿಸಿದ ಶವವನ್ನು ನಿಪಿ-14 ಮತ್ತು 17 ಪೋಟೋಗಳಲ್ಲಿ ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಬೂದು ಬಣ್ಣದ ಕಾರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮುದ್ದೆ ಮಾಲು-11 ಎಂದು ಗುರುತಿಸಲಾಯಿತು. ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಮೋಟಾರ್ ಸೈಕಲ್ ನಂಃ ಕೆಎ-65/ಹೆಚ್-2843 ನೇದನ್ನು, ದಿಃ10-12-2011 ರ ಆದೇಶದಂತೆ ಅದರ ಮಾಲೀಕರು ಈಗಾಗಲೇ ನ್ಯಾಯಾಲಯದಿಂದ ಬಿಡಿಸಿಕೊಂಡು ಹೋಗಿದ್ದು, ಸದರಿ ಬೈಕ್ ನ್ನು ನಾಲ್ಕು ಪೋಟೋಗಳಲ್ಲಿ ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಪೋಟೋಗಳನ್ನು ನಿಪಿ-27 ರಿಂದ 30 ಎಂದು ಗುರುತಿಸಲಾಯಿತು. ಉಳವಿ ಚೆಕ್ ಪೋಸ್ಟ್‌ನಲ್ಲಿ ವಾಹನಗಳು ಓಡಾಡಿದ ಬಗ್ಗೆ ನಮ್ಮಲ್ಲಿ ಯಾವುದೇ ದಾಖಲೆಗಳನ್ನು ನಿರ್ವಹಿಸುವುದಿಲ್ಲ, ಆದರೆ ಕದ್ರಾದ ಸಾಕಳಿ ಚೆಕ್ ಪೋಸ್ಟ್‌ನಲ್ಲಿ ವಾಹನಗಳು ಓಡಾಡಿದ ಮಾಹಿತಿಯನ್ನು ನಮೂದು ಮಾಡಲಾಗುತ್ತದೆ ಎಂದು ನುಡಿಯುತ್ತಾರೆ. ದಿಃ 16-10-2018 ರಂದು ಆಕಳಗವಿಗೆ ಹೋಗಿ ವಾಪಸ್ ಬಂದಂತಹ ಎರಡು ವ್ಯಕ್ತಿಗಳು ಹಾಗೂ ದಿಃ 23-10-2018 ರಂದು ಪೊಲೀಸರನ್ನು ಕರೆದುಕೊಂಡು ಬಂದಂತಹ ಎರಡು ವ್ಯಕ್ತಿಗಳೇ ಈ ದಿನ ನ್ಯಾಯಾಲಯದ ಮುಂದೆ ಇರುವ 2 ಮತ್ತು 3 ನೇ ಆರೋಪಿತರಾಗಿರುತ್ತಾರೆ ಹಾಗೂ ಅವರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ದಿಃ 15-10-

2018 ರಂದು ಹಾಗೂ ದಿಃ 16-10-2018 ರಂದು ಆರೋಪಿತರನ್ನು ನೋಡಿದ ಬಗ್ಗೆ ಹಾಗೂ ದಿಃ 23-10-2018 ರಂದು ಪೊಲಿಸರೊಂದಿಗೆ ಹೋಗಿ, 2 ಮತ್ತು 3 ನೇ ಆರೋಪಿತರು ತೋರಿಸಿದ ಶವವನ್ನು ನೋಡಿದ ಬಗ್ಗೆ ಹಾಗೂ ಅವರು ಆ ದಿನ ತಾವೇ ಪ್ರೇಮಕುಮಾರನನ್ನು ಕೊಲೆ ಮಾಡಿರುತ್ತೇವೆ ಎಂದು ಹೇಳಿದ ವಿಷಯವನ್ನು ತಿಳಿದು, ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದ**

5. ನನ್ನ ಮೂಲ ಊರು ಗೋಕಾಕ ತಾಲೂಕಿನ ಅಕ್ಕಿಸಾಗರ ಆಗಿರುತ್ತದೆ. ನಾನು ಸರಕಾರದ ಖಾಯಂ ನೌಕರನಾಗಿರುತ್ತೇನೆ. ಅರಣ್ಯ ಇಲಾಖೆಗೆ ನೇಮಕಗೊಳ್ಳುವ ಮೊದಲು ನಾನು ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡಿರುತ್ತೇನೆ. ಅರಣ್ಯ ವೀಕ್ಷಣೆಗೆ ಹೋಗುವುದು, ಕಾವಲು ಕಾಯುವುದು ಹಾಗೂ ಅರಣ್ಯ ಪ್ರದೇಶದಲ್ಲಿ ಯಾವುದೇ ಅಪರಾಧವಾಗದಂತೆ ತಡೆಯುವುದು ನಮ್ಮ ಕರ್ತವ್ಯ ಆಗಿರುತ್ತದೆ. ನಮ್ಮ ಕೆಲಸದ ಸಮಯವು 24X7 ಗಂಟೆಯಾಗಿರುತ್ತದೆ. ನಮಗೆ ಸರಕಾರದ ವತಿಯಿಂದ ವಸತಿ ಗೃಹಗಳನ್ನು ನೀಡಿರುತ್ತಾರೆ. ನಾವು ವಾದ 6 ದಿನಗಳಲ್ಲಿ ಒಂದೇ ಕಡೆ ಕೆಲಸ ಮಾಡುವುದಿಲ್ಲ. ಪ್ರತಿದಿನ ನಾವು ಬೇರೆ ಬೇರೆ ಹಳ್ಳಿಗಳಿಗೆ ಹೋಗಿ ವೀಕ್ಷಣೆ ಮಾಡಿ, ಪುನಃ ಚೆಕ್ ಪೋಸ್ಟ್ ಬರುತ್ತೇವೆ. ಅರಣ್ಯ ವೀಕ್ಷಣೆಯ ನಂತರ ನಮಗೆ ಚೆಕ್ ಪೋಸ್ಟ್ ಬರಲು ಯಾವುದೇ ನಿರ್ದಿಷ್ಟ ಸಮಯ ನಿಗದಿ ಇರುವುದಿಲ್ಲ. ನನ್ನ ಜೊತೆ ಬೇರೆ ಯಾರು ಗಾರ್ಡ್ ಗಳು ಇರುವುದಿಲ್ಲ, ನಾನು ಒಬ್ಬನೇ ಗಾರ್ಡ್ ಇರುತ್ತೇನೆ, ಆದರೆ ನನ್ನ ಜೊತೆ ಅರಣ್ಯ ವೀಕ್ಷಕರು ಇರುತ್ತಾರೆ. ಅರಣ್ಯ ವೀಕ್ಷಣೆಗೆ ನಾವೆಲ್ಲರೂ ಹೋಗುತ್ತಿದ್ದೆವು ಹಾಗೂ ವಾಪಸ್ ಚೆಕ್ ಪೋಸ್ಟ್ ಎಲ್ಲರೂ ಬರುತ್ತಿದ್ದೇವು. ಅರಣ್ಯ ವೀಕ್ಷಣೆಗೆ ಹೋದಾಗ ಚೆಕ್ ಪೋಸ್ಟ್ ನಲ್ಲಿ ಯಾರು ಇರುತ್ತಿದ್ದರು ಎಂದು ಪ್ರಶ್ನೆ ಕೇಳಲಾಗಿ, ಒಬ್ಬ ವೀಕ್ಷಕ ಇರುತ್ತಿದ್ದ ಹಾಗೂ ಆತ ಅಡುಗೆ ಕೂಡ ಮಾಡುತ್ತಿದ್ದ.

6. ಚೆಕ್ ಪೋಸ್ಟ್ ನಿಂದ ಉಳವಿಗೆ ಹೋಗುವ ರಸ್ತೆ 10 ಮೀಟರ್ ದೂರದಲ್ಲಿರುತ್ತದೆ. ಪ್ರವಾಸಿ ಸ್ಥಳಗಳಿಗೆ ಬಂದ ಪ್ರವಾಸಿಗರ ಹೆಸರು ಮತ್ತು ಅವರ ವಿವರವನ್ನು ನಾವು ಚೆಕ್ ಪೋಸ್ಟ್ ನಲ್ಲಿ ನಮೂದಿಸಿರುವುದಿಲ್ಲ. ಕಾರವಾರದಿಂದ ಜೋಯಿಡಾಗೆ ಹೋಗುವ ಮುಖ್ಯ ರಸ್ತೆ ಚೆಕ್

ಪೋಸ್ಟ್ ನಿಂದ 24 ಕಿ.ಮೀ ದೂರದಲ್ಲಿರುತ್ತದೆ. ಚೆಕ್ ಪೋಸ್ಟ್ ನ ಬಳಿ ಇರುವ ರಸ್ತೆಯ ಕಾಂಕ್ರಿಟ್ ರಸ್ತೆಯಾಗಿರುತ್ತದೆ. ದಿಃ 23-10-2018 ಕ್ಕಿಂತ ಮೊದಲು ಪೊಲೀಸರು ಚೆಕ್ ಪೋಸ್ಟ್ ನ ಬಳಿ ಬಂದಿರುವುದಿಲ್ಲ ಹಾಗೂ ನನ್ನ ಬಳಿ ಯಾವುದೇ ವಿಚಾರಣೆ ಮಾಡಿರುವುದಿಲ್ಲ. ದಿಃ 23-10-2018 ರಂದೇ ಮೊದಲ ಬಾರಿಗೆ ನಾನು ಪೊಲೀಸರನ್ನು ನೋಡಿರುತ್ತೇನೆ. ಅದೇ ರೀತಿ ಪೊಲೀಸರು ದಿಃ 23-10-2018 ಕ್ಕಿಂತ ಮೊದಲು ನನ್ನನ್ನು ಠಾಣೆಗೆ ಕರೆದು ವಿಚಾರಣೆ ಮಾಡಿರುವುದಿಲ್ಲ. ದಿಃ 23-10-2018 ರ ನಂತರವೂ ಪೊಲೀಸರು ನನ್ನನ್ನು ಠಾಣೆಗೆ ಕರೆದಿರುವುದಿಲ್ಲ ಹಾಗೂ ಯಾವುದೇ ವಿಚಾರಣೆ ಮಾಡಿರುವುದಿಲ್ಲ. ಈಗ ವಿಸಿಯಲ್ಲಿ ಕಾಣುತ್ತಿರುವ 3 ನೇ ಆರೋಪಿಯು ಉಳವಿ ವಾಸಿಯಾಗಿದ್ದು, ಆತನ ಪರಿಚಯ ಇರುತ್ತದೆ. 3 ನೇ ಆರೋಪಿಯು ಉಳವಿ ವಾಸಿ ಅಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿಯು ಉಳವಿ ವಾಸಿಯಾಗಿದ್ದು, ಉಳವಿಯಲ್ಲಿ ಆತನ ಮನೆ ಎಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ.

7. 3 ನೇ ಆರೋಪಿಯ ತಂದೆ ಪಂಚಾಯತಿಯಿಂದ ಮಂಜೂರಾದ ಕೆಲಸ-ಕಾರ್ಯಗಳ ಕಾಂಟ್ರ್ಯಾಕ್ಟ್ ಪಡೆದು ಕೆಲಸ ಮಾಡುತ್ತಿದ್ದು, ಉಳವಿ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ, ಹೊಂಡಗಳ ಮತ್ತು ಸೇತುವೆಗಳ ಕಾಮಗಾರಿಯನ್ನು ಮಾಡುತ್ತಿದ್ದರು ಎಂದರೆ ಸರಿ. 3 ನೇ ಆರೋಪಿಯು ತನ್ನ ತಂದೆಗೆ ಕೆಲಸಕ್ಕೆ ಸಹಾಯ ಮಾಡುವ ಸಲುವಾಗಿ ಗೂಡ್ಸ್ ವಾಹನವನ್ನು ಹೊಂದಿದ್ದು, ಯಾವಾಗಲೂ ಆತನು ಅದರಲ್ಲಿ ಸುತ್ತಾಡುತ್ತಿದ್ದ ಎಂದರೆ ಸರಿ. ಹೀಗೆ 3 ನೇ ಆರೋಪಿಯು ಸುತ್ತಾಡುತ್ತಿದ್ದರಿಂದ ಆತನ ಪರಿಚಯ ನನಗೆ ಇರುತ್ತದೆ ಎಂದರೆ ಸರಿ. ದಿಃ 15-10-2018 ರಂದು ನಾವು ಚೆಕ್ ಪೋಸ್ಟ್ ನಲ್ಲಿದ್ದಾಗ ಎಷ್ಟು ಜನರು ಬಂದು-ಹೋಗಿರುತ್ತಾರೆ ಎಂದುಹಾಗೂ ಯಾವ ವಾಹನಗಳಲ್ಲಿ ಬಂದು ಹೋಗಿರುತ್ತಾರೆ ಎಂದು ಹೇಳಲು ಬರುತ್ತದೆಯಾ? ಎಂದರೆ ಸಾಕ್ಷಿಯು ಸ್ಥಳೀಯರು ಬಂದರೇ ಹೇಳಬಹುದು ಎಂದು ನುಡಿಯುತ್ತಾರೆ.

8. ನಿಪಿ-27 ರಿಂದ 30 ರಲ್ಲಿ ಕಾಣುತ್ತಿರುವ ಬೈಕ್ ಮೇಲೆ 3 ನೇ ಆರೋಪಿಯು ಘಟನೆಗೂ ಮೊದಲು ಸುತ್ತಾಡುವುದನ್ನು ನಾನು ನೋಡಿರುತ್ತೇನೆ. ಘಟನೆಗೂ ಮೊದಲು 3 ನೇ ಆರೋಪಿಯು ಬೈಕ್ ಮೇಲೆ ಸುತ್ತಾಡುವುದನ್ನು ನಾನು ನೋಡಿದ ದಿನಾಂಕಗಳನ್ನು ನನಗೆ ಈಗ ಹೇಳಲು ಬರುವುದಿಲ್ಲ. ನಿಪಿ-27 ರಿಂದ 30 ರಲ್ಲಿ ಕಾಣುತ್ತಿರುವ ಬೈಕ್ 3 ನೇ ಆರೋಪಿಗೆ ಸೇರಿಲ್ಲದ ಕಾರಣ, ಆತ ಎಂದಿಗೂ ಸದರಿ ಬೈಕ್ ಮೇಲೆ ಸುತ್ತಾಡಿಲ್ಲ ಎಂದರೆ ಸರಿಯಲ್ಲ.

9. ಘಟನಾ ಕಾಲದಲ್ಲಿ ನಾನು ನೋಡಿದ ಮುದ್ದೆ ಮಾಲು-11 ಜೆನ್ ಕಾರ್ ಬಹಳ ಚೆನ್ನಾಗಿತ್ತು. ಸದರಿ ಕಾರಿನ ನಂಬರ್ ನ್ನು ನನಗೆ ಹೇಳಲು ಬರುವುದಿಲ್ಲ. ಸದರಿ ಕಾರಿನ ಬಣ್ಣದ ರೀತಿಯಲ್ಲಿಯೇ ಅದೇ ನಮೂನೆಯ ಅದೇ ಬಣ್ಣದ ಇತರೇ ವಾಹನಗಳು ಚೆಕ್ ಪೋಸ್ಟ್ ನಲ್ಲಿ ಬಂದು ಹೋಗಿರುತ್ತವೆ ಎಂದರೆ ಸರಿ. ಘಟನಾ ದಿನ ನಾನು ನೋಡಿದ ಕಾರ್ ಹಾಗೂ ಈ ದಿನ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು-11 ಕಾರ್ ಎರಡೂ ಒಂದೇ ಎಂದು ಹೇಳಲು ಯಾವುದೇ ವಿಶೇಷ ಗುರುತು ಇರುವುದಿಲ್ಲ. ಸದರಿ ಸುಜುಕಿ ಜೆನ್ ಕಾರ್ ನ ನಂಬರ್ ಹಾಗೂ ವಿಶೇಷ ಗುರುತಿನ ಬಗ್ಗೆ ನನಗೆ ಗೊತ್ತಿಲ್ಲದ ಕಾರಣ ಇದೇ ಕಾರನ್ನು ಆ ದಿನ ಚೆಕ್ ಪೋಸ್ಟ್ ನಲ್ಲಿ ತಂದಿರುತ್ತಾರೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ.

10. ದಿಃ 15-10-2018 ಹಾಗೂ ದಿಃ 16-10-2018 ರಂದು ನಾನು ಚೆಕ್ ಪೋಸ್ಟ್ ಬಳಿ ಯಾವುದೇ ಕಾರನ್ನು ನೋಡದೆ ಇದ್ದರೂ ಸಹ ಈ ದಿನ ನಾನು ನ್ಯಾಯಾಲಯದ ಮುಂದೆ ನೋಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿನ ನೋಡಿದ ಮುದ್ದೆ ಮಾಲು-11 ಕಾರು ಅಪಘಾತಕ್ಕೆ ಒಳಗಾದ ಕಾರಿನಂತೆ ಕಾಣುತ್ತದೆ ಎಂದರೆ ಸರಿ. ಈಗ ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯನ್ನು ದಿಃ 23-10-2018 ರಂದು ಹಾಗೂ ಈ ದಿನ ನ್ಯಾಯಾಲಯದಲ್ಲಿ ನೋಡುತ್ತಿರುವುದನ್ನು ಬಿಟ್ಟು ಬೇರೆ ಎಂದಿಗೂ ನಾನು ನೋಡಿರುವುದಿಲ್ಲ ಎಂದರೆ ಸರಿ. ದಿಃ 23-10-2018 ರಂದು ನಾನು ಉಳವಿ ಚೆಕ್ ಪೋಸ್ಟ್ ಬಳಿ ಬೆಳಿಗ್ಗೆ 08-30 ಗಂಟೆಗೆ ಕರ್ತವ್ಯಕ್ಕೆ ಬಂದಿರುತ್ತೇನೆ. ಆ ದಿನ ನನ್ನ ಜೊತೆಯಲ್ಲಿ ಚೆಕ್ ಪೋಸ್ಟ್ ನಲ್ಲಿ ಕರ್ತವ್ಯದ ಮೇಲೆ ಚಾಸಾ-23 ಅಖಿಲ್, ದಿನೇಶ ನಾಯ್ಕು, ಪ್ರದೀಪ್ ಹಾಗೂ ಡಿ.ಆರ್.ಎಫ್.ಓ ಆದ ಶಂಕರಗೌಡ ರವರು ಇದ್ದೆವು. ದಿಃ 23-10-2018 ರಂದು ಪೊಲೀಸರು ಚೆಕ್ ಪೋಸ್ಟ್ ನ ಬಳಿ ವ್ಯಾನ್ ನಲ್ಲಿ ಬಂದಾಗ ಎಷ್ಟು ಜನ ಪೊಲೀಸರು ಇದ್ದರು ಎಂದು ನನಗೆ ಗೊತ್ತಿಲ್ಲ. ಆ ದಿನ ಪೊಲೀಸರು ಸ್ಥಳಕ್ಕೆ ಬಂದಾಗ, ಪೊಲೀಸರು ಸೇರಿ ಒಟ್ಟು 30-40 ಜನರು ಸೇರಿದ್ದರು. ಪೊಲೀಸರು ಆ ದಿನ ಚೆಕ್ ಪೋಸ್ಟ್ ಬಳಿ ಬಂದ ನಂತರ ಅವರು ಡಿ.ಆರ್.ಎಫ್.ಓ ರವರ ಬಳಿ ಬೀಟ್ ಕರ್ತವ್ಯದಲ್ಲಿದ್ದ ಸಿಬ್ಬಂದಿಗಳ ಮಾಹಿತಿಯನ್ನು ಪಡೆದುಕೊಂಡಿರುತ್ತಾರೆ. ಆ ದಿನ ಪೊಲೀಸರು ಮಾಹಿತಿಯನ್ನು ನೀಡುವಂತೆ ಡಿ.ಆರ್.ಎಫ್.ಓ ರವರಿಗೆ ಲಿಖಿತವಾಗಿ ಯಾವುದೇ ಕೋರಿಕೆಯನ್ನು ನೀಡಿಲ್ಲ ಅದೇ ರೀತಿ ಡಿ.ಆರ್.ಎಫ್.ಓ ರವರೂ ಸಹ ಲಿಖಿತವಾಗಿ ಯಾವುದೇ ಮಾಹಿತಿಯನ್ನು ನೀಡಿಲ್ಲ. ಆ ದಿನ ಅರಣ್ಯ ಪ್ರದೇಶಕ್ಕೆ ಅಲ್ಲಿ ಸೇರಿದ್ದ ಜನರ ಪೈಕಿ 3 ಜನರನ್ನು ಚೆಕ್ ಪೋಸ್ಟ್ ನಲ್ಲಿ ಬಿಟ್ಟು, ಉಳಿದ 30-40 ಜನರು ಅರಣ್ಯ

ಪ್ರದೇಶಕ್ಕೆ ಹೋಗಿರುತ್ತೇವೆ. ಆ ದಿನ ಅರಣ್ಯ ಪ್ರದೇಶಕ್ಕೆ ಹೋದಾಗ ಡಿ.ಆರ್.ಎಫ್.ಓ ರವರು ನಮ್ಮ ಸಂಗಡ ಬಂದಿರುವುದಿಲ್ಲ.

11. ನಾವು ಅರಣ್ಯ ಪ್ರದೇಶಕ್ಕೆ ಹೋಗುವಾಗ ಆಕಳಗವಿ ವರೆಗೆ ರಸ್ತೆ ದೊಡ್ಡದಿದ್ದು, ಆ ನಂತರ ಚಿಕ್ಕದಿರುತ್ತದೆ. ಚೆಕ್ ಪೋಸ್ಟ್ ನಿಂದ ಶವ ಬಿದ್ದ ಸ್ಥಳಕ್ಕೆ ಹೋಗಲು 1 ½ ಗಂಟೆ ಆಗಿರುತ್ತದೆ. ನಾವು ಅರಣ್ಯ ಪ್ರದೇಶಕ್ಕೆ ಹೋಗುವಾಗ ನಮ್ಮ ಮುಂದುಗಡೆ ಪೊಲೀಸರು ಹಾಗೂ 2 ಮತ್ತು 3 ನೇ ಆರೋಪಿತರು ಇದ್ದರು ಹಾಗೂ ನಮ್ಮ ಹಿಂದುಗಡೆ ಇತರೇ ಉಳಿದ ಜನರು ಬರುತ್ತಿದ್ದರು. 2 ಮತ್ತು 3 ನೇ ಆರೋಪಿತರೇ ಪೋಲೀಸರನ್ನು ಮುಂದೆ ಕರೆದುಕೂಂಡು ಹೋಗುತ್ತಿದ್ದರು. ಆ ದಿನ ಪೊಲೀಸರು ಅರಣ್ಯ ಪ್ರದೇಶಕ್ಕೆ ಕರೆದುಕೊಂಡ ಬಂದಿದ್ದ 2 ಮತ್ತು 3 ನೇ ಆರೋಪಿತರಿಗೆ ಕೋಳವನ್ನು ತೋಡಿಸಿದ್ದರು ಎಂದರೆ ಸರಿ. ನಾವು ಹೋದ ಜನರ ಪೈಕಿ ಯಾರು-ಯಾರು ಏನೇನು ಮಾತನಾಡುತ್ತಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ, ಆದರೆ ಪೊಲೀಸರು ಹಾಗೂ 2 ಮತ್ತು 3 ನೇ ಆರೋಪಿತರು ಮಾತನಾಡುವುದನ್ನು ಕೇಳಿಸಿಕೊಂಡಿರುತ್ತೇನೆ.

12. ನಾವು ನಿಂತ ಸ್ಥಳದಿಂದ 30 ಮೀಟರ್ ತಗ್ಗಿನಲ್ಲಿ ಶವವು ಬಿದ್ದಿರುತ್ತದೆ. ಆ ನಂತರ 5-10 ನಿಮಿಷಗಳ ನಂತರ ನಾನು ಕೆಳಗೆ ಹೋಗಿ ಶವವನ್ನು ನೋಡಿರುತ್ತೇನೆ. ನಾವು ಶವವನ್ನು ನೋಡಿದಾಗ, ಅದು ಉಬ್ಬಿದ್ದು ಹಾಗೂ ಕೊಳೆಯಲು ಪ್ರಾರಂಭವಾಗಿತ್ತು. ಶವವು ಉಬ್ಬಿದ್ದ ಕಾರಣ ದೇಹದ ಮೇಲೆ ಬಿರುಕು ಬಿಟ್ಟ ಗಾಯಗಳು ಆಗಿದ್ದವು ಎಂದರೆ ಸರಿಯಲ್ಲ. ನಾವು ನೋಡಿದ ಶವವು ಉಬ್ಬಿದ್ದರಿಂದ ಹಾಗೂ ಕೊಳೆಯಲು ಪ್ರಾರಂಭವಾಗಿದ್ದರಿಂದ ಯಾವ ಕಾರಣದಿಂದ ಸತ್ತಿರುತ್ತಾನೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾವು ಶವ ಬಿದ್ದ ಸ್ಥಳವನ್ನು ತಲುಪಿದಾಗ ಬೆಳಿಗ್ಗೆ 10-30 ಗಂಟೆ ಆಗಿರುತ್ತದೆ ಹಾಗೂ ಅಲ್ಲಿಂದ ನಾವು ಚೆಕ್ ಪೋಸ್ಟ್ ಬಳಿ ಬಂದಾಗ ಸಂಜೆ 04-30 ಗಂಟೆ ಆಗಿರುತ್ತದೆ. ಆ ದಿನ ಬೆಳಿಗ್ಗೆ 10-30 ಗಂಟೆಯಿಂದ ಸಂಜೆ 04-30 ಗಂಟೆಯ ವರೆಗೆ ಪೊಲೀಸರು ಯಾವ-ಯಾವ ಕೆಲಸಗಳನ್ನು ಯಾವ-ಯಾವ ಸಮಯದಲ್ಲಿ ಮಾಡಿರುತ್ತಾರೆ ಎಂದು ನಿಖರವಾಗಿ ನನಗೆ ಹೇಳಲು ಬರುವುದಿಲ್ಲ. 2 ಮತ್ತು 3 ನೇ ಆರೋಪಿಗಳು ನಾವೇ ಪ್ರೇಮಕುಮಾರನನ್ನು ಕೊಲೆ ಮಾಡಿ, ಇಲ್ಲಿಯೇ ಬಿಸಾಡಿರತ್ತೇವೆ ಎಂದು ಪೊಲೀಸರ ಮುಂದೆ ಹೇಳದೆ ಇದ್ದರೂ ಸಹ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

13. ದಿಃ 23-10-2018 ರಂದು ಪೊಲೀಸರು ಹಾಗೂ 2 ಮತ್ತು 3 ನೇ ಆರೋಪಿತರು ಹಾಗೂ ಇತರೇ ಜನರು ಬಂದಿದ್ದು, ನಾವು ಸಹ ಅರಣ್ಯ ಪ್ರದೇಶಕ್ಕೆ ಹೋಗಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 15-10-2018 ರಂದು ಮತ್ತು ದಿಃ 16-10-2018 ರಂದು 2 ಮತ್ತು 3 ನೇ ಆರೋಪಿತರು ಚೆಕ್ ಪೋಸ್ಟ್ ಗೆ ಬಂದು ನಂತರ ಆಕಳಗವಿ ಅರಣ್ಯ ಪ್ರದೇಶಕ್ಕೆ ಹೋಗಿ, ಸ್ವಲ್ಪ ಸಮಯದ ನಂತರ ವಾಪಸ್ ಹೋಗಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ನಂತರ 3 ನೇ ಆರೋಪಿ ಬೈಕ್ ನಲ್ಲಿ ಹೋದ ಹಾಗೂ 2 ನೇ ಆರೋಪಿ ಕಾರಿನಲ್ಲಿ ಹೋದ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರಿಂದ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ವಿ.ಎನ್.ಎನ್ ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್.ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ